ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕಂದಾಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ

ದಿನಾಂಕ : DATE : 10/03/2020

# ಪೋಡಿ ಸಮಸ್ಯೆ ನಿವಾರಣೆಗೆ ಡಿಸಿಗಳಿಂದ ಅದಾಲತ್

**ವಿಧಾನಸಭೆ:** ಪೋಡಿ ಹಾಗೂ ಪಹಣಿ ಸಮಸ್ಯೆಯ ಬಗ್ಗೆ ಹಲವು ಸದಸ್ಯರು ವಿಧಾನಸಭೆಯಲ್ಲಿ ಪ್ರಸ್ತಾಪಿಸಿ ಸಮಸ್ಯೆ ಬಗೆಹರಿಸುವಂತೆ ಸರಕಾರವನ್ನು ಒಕ್ಕೊರಲಿನಿಂದ ಒತ್ತಾಯಿಸಿದ ಪ್ರಸಂಗ ನಡೆಯಿತು.

ಬಿಜೆಪಿ ಶಾಸಕ ಬೆಳ್ಳಿ ಪ್ರಕಾಶ್ ಅವರ ಪ್ರಶ್ನೆಗೆ ಉತ್ತರಿಸಿದ ಕಂದಾಯ ಸಚಿವ ಆರ್. ಅಶೋಕ್, ಭೂಮಿಯ ಸರ್ವೆ ಕಾರ್ಯ ದೊಡ್ಡ ಕಗ್ಗಂಟಾಗಿದೆ. ಒಬ್ಬರಿಗೆ 100 ಎಕರೆ ಜಮೀನಿದ್ದರೆ ಅವರಿಗೆ 150 ಎಕರೆ ಮಂಜೂರಾಗಿರುವ ಪ್ರಕರಣಗಳೂ ಇವೆ. ಕೆಲವು ಅಧಿಕಾರಿಗಳು ನಿವೃತ್ತ ಆದ ನಂತರವೂ ಸಹಿ ಹಾಕಿ ಪ್ರಕರಣಗಳೂ ಇವೆ. ಇಂತಹ ಪ್ರಕರಣಗಳು ನ್ಯಾಯಾಲಯದಲ್ಲಿವೆ. ಈ ರೀತಿಯ ಹಲವು ಸಮಸ್ಯೆಗಳಿವೆ, ಹಾಗಾಗಿ ಪೋಡಿ ಸಮಸ್ಯೆ ನಿವಾರಣೆಯಾಗಿಲ್ಲ ಎಂದರು.

ರಾಜ್ಯವನ್ನು ಪೋಡಿ ಮುಕ್ತಗೊಳಿಸುವ ಕಾರ್ಯ 2015ರಲ್ಲಿ ಆರಂಭವಾಯಿತು. ಸದನದಲ್ಲಿ ಸದಸ್ಯರು ಕೊಟ್ಟ ಸಲಹೆ ಮೇರೆಗೆ, ಜಿಲ್ಲಾಧಿಕಾರಿ, ಸಹಾಯಕ ಆಯುಕ್ತರು, ತಹಶೀಲ್ದಾರ್ ಅವರು ಒಂದೊಂದು ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡು ಒಂದು ದಿನ ಅದಾಲತ್ ನಡೆಸಿ ಪೋಡಿ ಮತ್ತು ಪಹಣಿ ಸಮಸ್ಯೆ ನಿವಾರಿಸುವಂತೆ ಸೂಚಿಸಲಾಗಿದೆ ಎಂದರು.

ಕಾಂಗ್ರೆಸ್ ಶಾಸಕ ಡಾ. ರಂಗನಾಥ್ ಮಾತನಾಡಿ, ತಮ್ಮ ಬಳಿಗೆ ಕ್ಷೇತ್ರದ ನೂರು ಸಮಸ್ಯೆ ಬಂದರೆ ಅವುಗಳಲ್ಲಿ ಶೇ.50ರಷ್ಟು ಸಮಸ್ಯೆ ಪೋಡಿಗೆ ಸಂಬಂಧಿಸಿದ್ದಾಗಿದೆ. ತಾವು ಕೂಡ ಕ್ಷೇತ್ರದಲ್ಲಿ ಸ್ವಯಂ ಕಂದಾಯ ಆಂದೋಲನ ಮಾಡಿದ್ದೆ. ಒಂದು ತಿಂಗಳ ಕಾಲ 60 ಜನ ಅಧಿಕಾರಿಗಳನ್ನು ಕರೆಸಿ ಆಂದೋಲನ ನಡೆಸಿದ್ದೇನೆ. ಪೋಡಿ ಸಮಸ್ಯೆ ಬಗೆಹರಿಸಲು ದೊಡ್ಡ ಕ್ರಾಂತಿಯೇ ಆಗಬೇಕು. ಕಂದಾಯ ಸಚಿವರಿಗೆ ಒಳ್ಳೆಯ ಹೆಸರು ತೆಗೆದುಕೊಳ್ಳಲು ಇದೊಂದು ಉತ್ತಮ ಅವಕಾಶ ಎಂದು ಹೇಳಿದರು.